**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3837/2021**

| | | | |
|---|---|---|---|
| **ಹೆಸರು** | **:** | **ಸೋಮಶೇಖರ** | **ದೋ.ಸಾ. 1** |
| **ತಂದೆಯ ಹೆಸರು** | **:** | **ಮಲ್ಲಪ್ಪ** | **ಪ್ರಾ.ಸಾ. 1** |
| **ವಯಸ್ಸು** | **:** | **37 ವರ್ಷ** | **ದಿನಾಂಕಃ 04-10-2023** |
| **ಉದ್ಯೋಗ** | **:** | **ಚಾಲಕ** | |
| **ವಾಸಸ್ಥಳ** | **:** | **ಪರದಾರ ಮೋತಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಸಂಬಂಧಿಕರು. ಚಾಸಾ-4 ನನ್ನ ಹೆಂಡತಿ. ಚಾಸಾ-7 ನನ್ನ ಮಗ. ಚಾಸಾ-5 ಮತ್ತು ಚಾಸಾ-6 ರವರು ನಮ್ಮ ಊರಿನವರು.

ದಿನಾಂಕಃ 08-06-2021 ರಂದು ಮಧ್ಯಾಹ್ನ 12.00 ಸುಮಾರಿಗೆ ನಾನು ಪರದಾರಮೊತಕಪಳ್ಳಿಯಲ್ಲಿರುವ ನಮ್ಮ ಮನೆಯಲ್ಲಿರುವಾಗ ನ್ಯಾಯಾಲಯದ ಮುಂದೆ ಇರುವ 1,2, 3,5 ನೇ ಆರೋಪಿತರು ಹಾಜಗೂ ಗೈರು ಹಾಜರಿರುವ 4 ನೇ ಆರೋಪಿತರು ನಮ್ಮ ಮನೆಗೆ ಬಂದು ಗಿಡ ಮಾರಾಟ ಮಾಡಿರುವ ಹಣ ಕೊಡಲು ಕೇಳಿದಾಗ ತಮ್ಮ ಕೈಗಳಿಂದ ನನ್ನ ಕೈಗೆ, ಬೆನ್ನಿಗೆ ಹೊಡೆದಿರುತ್ತಾರೆ.

ಅದೇ ದಿನ ಮಧ್ಯಾಹ್ನ 3.30 ಗಂಟೆ ಸುಮಾರಿಗೆ ಚಾಸಾ-5 ರವರ ಮನೆ ಹತ್ತಿರ ಆಕಳಿಗೆ ಮೇವು ಕೊಡಲು ಹೋದಾಗ 2 ಮತ್ತು 5 ನೇ ಆರೋಪಿತರು ಬಂದು ನನಗೆ ಬಡಿಗೆಯಿಂದ ನನ್ನ ಎಡಗೆ ಬೆರಳಿಗೆ, ಬೆನ್ನಿಗೆ ಹೊಡೆದಿರುತ್ತಾರೆ. ಆಗ ಚಾಸಾ5 ರವರು ಬಂದು ಜಗಳ ಬಿಡಿಸಿರುತ್ತಾರೆ. 2 ಮತ್ತು 5 ನೇ ಆರೋಪಿತರು ನನಗೆ ಹೊಡೆದ ಕಾರಣ ನಾನು ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ. ಆಗ ಚಾಸಾ-4 ರವರು ಮಧ್ಯಾಹ್ನ 4.00 ಗಂಟೆಗೆ ಬಂದು ಸುಲೆಪೇಟ ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ಸುಲೆಪೇಟಗೆ ಹೋಗುವಷ್ಟರಲ್ಲಿ ನನನಗೆ ಪ್ರಜ್ಞೆ ಬಂದಿರುತ್ತದೆ. ನಾವು ದೂರು ನೀಡಲು ಹೋದಾಗ ಪೊಲೀಸರು ಮೊದಲು ಚಿಕಿತ್ಸೆ ಪಡೆದುಕೊಳ್ಳಲು ಹೇಳಿದ ಕಾರಣ ಸಾಯಿ ಕ್ಲಿನಿಕ ಸುಲೆಪೇಟಗೆ ಹೋಗಿ ಚಿಕಿತ್ಸೆಯನ್ನು ಪಡೆದು 1 ಗಂಟೆ ಬಿಟ್ಟು ಸುಲೆಪೆಟ ಪೊಲೀಸ ಠಾಣೆಗೆ ದೂರು ನೀಡಲು ಹೋದಾಗ ನಮ್ಮ ದೂರನ್ನು ಪಡೆದುಕೊಂಡಿರುವುದಿಲ್ಲ. ಆದ್ದರಿಂದ ಘಟನೆ ನಡೆದ 7-85 ದಿನಗಳಾದ ಮೇಲೆ ನ್ಯಾಯಾಲಯಕ್ಕೆ ಬಂದು ಖಾಸಗಿ ದೂರನ್ನು ಸಲ್ಲಿಸಿದ್ದೇನೆ. ಈಗ ನೋಡುತಿರುವ ದೂರು ನಾನೇ ಸಲ್ಲಿಸಿದ್ದು ಮತ್ತು ಅದರಲ್ಲಿರುವ

ಸಹಿ ನನ್ನದೆ. ಸದರಿ ಖಾಸಗಿ ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ನೋಡುತಿರುವ ದೂರನ್ನು ನಾನೇ ಪೊಲೀಸ ಠಾಣೆಗೆ ಕೊಡಲು ಹೋಗಿದ್ದೆ. ಸದರಿ ದೂರನ್ನು ನಿಪಿ-2 ಎಂದು ಗುರುತಿಸಲಾಯಿತು. ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು.

ದಿನಾಂಕಃ 07-07-2021 ರಂದು ಪೊಲೀಸರು ಪಂಚನಾಮೆ ಮಾಡಲು ಬಂದಾಗ ನನಗೆ ಚಿಂಚೋಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿದ್ದಾರೆ. ಈಗ ನೋಡುತಿರುವ ಎರಡು ಭಾವಚಿತ್ರಗಳಲ್ಲಿ ಘಟನೆ ನಡೆದಿದೆ. ಈಗ ನೋಡುತಿರುವ ಮೊದಲನೆ ಭಾವಚಿತ್ರ ನಮ್ಮ ಮನೆಯ ಮುಂದಿನ ಸ್ಥಳವಾಗಿದೆ. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ಈಗನೋಡುತಿರುವ ಇನ್ನೊಂದು ಭಾವಚಿತ್ರ ಚಾಸಾ-5 ರವರ ಮನೆಯ ಮುಂದಿನನ ಸ್ಥಳವಾಗಿದೆ. ಸದರಿ ಭಾವಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು.

ಆರೋಪಿತರು ಹೊಡೆದಿರುವ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತಿರುವ ಬಡಿಗೆಯಿಂದ ಆರೋಪಿತರು ನನಗೆ ಹಲ್ಲೆ ಮಾಡಿದ್ದಾರೆ. ಸದರಿ ಬಡಿಗೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ದೂರಿಗೆ, ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಜಗಳ ನಡೆದಾಗ ನನ್ನ ಹೆಂಡತಿ ಜಗಳ ಬಿಡಿಸಲು ಬಂದಾಗ ಆರೋಪಿತರು ಅವಮಾನ ಮಾಡುವ ಉದ್ದೇಶದಿಂದ ನನ್ನ ಹೆಂಡತಿಯ ಸೀರೆ ಹಿಡಿದು ಎಳೆದಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**